ಮತ್ತೊಬ್ಬ ಆಫೀಸರ್.

'ಜಹನ್ನಂ ಅಂದರೆ ನರಕ. 'ಉಗ್ರವಾದಿಗಳು ನರಕಕ್ಕೆ ಹೋಗಲಿ' ಅಂತ ಅದರ ಅರ್ಥ. ಈ ಕೋಡ್ ವರ್ಡ್ ತಯಾರಿ ಮಾಡಿದವನೂ ಅವನೇ. ಪೂರ್ತಿ ಹೆಸರು ಖಾನ್ ಅಬ್ದುಲ್ ಗಫಾರ್ ಖಾನ್, ಹೆಸರಿಗೆ ತಕ್ಕ ಹಾಗೆ ಭಾರತ ರತ್ನ ಗಫಾರ್ ಖಾನ್‌ರಷ್ಟೇ ದೇಶಭಕ್ತಿ ಇರುವವನು. ಎಲ್ಲರೂ ಮಸೀದಿಗಳಿಗೆ, ಗುಡಿಗಳಿಗೆ ಹೋಗಿ ಪ್ರಾರ್ಥನೆ ಮಾಡಿದರೆ, ಅವನು ಬಾವುಟಕ್ಕೆ ಪ್ರಾರ್ಥನೆ ಮಾಡುತ್ತಾನೆ.'

ಅದೇಕೋ ಗೊತ್ತಿಲ್ಲ ಆ ಮಾತು ಕೇಳಿ ಕೃಷ್ಣನ ಮೈ ಜುಂ ಎಂದಿತು. ಜೇಬಿನಲ್ಲಿದ್ದ ವಿಘ್ನೇಶ್ವರನ ಫೋಟೋವನ್ನು ಅಪ್ರಯತ್ನವಾಗಿ ಒಮ್ಮೆ ಸವರಿದನು.

ತನ್ನ ಬದುಕಿನಲ್ಲಿ ಒಂದು ಬದಲಾವಣೆಗೆ ಆ ಗಫಾರ್‌ಖಾನ್ ಕಾರಣನಾಗುತ್ತಾನೆ ಎನ್ನುವುದು ಆ ಕ್ಷಣ ತಿಳಿದಿರಲಿಲ್ಲ ಅವನಿಗೆ.

—2—

ಪಾಕಿಸ್ತಾನ್ ಆಕ್ರಮಿತ ಕಾಶ್ಮೀರ್.

ಭಾರತದ ನೆರೆಹೊರೆ ದೇಶಗಳ ಹೆಸರು ಹೇಳಿ ಎಂದು ಕೇಳಿದರೆ ವಿದ್ಯಾರ್ಥಿಗಳು 'ನೇಪಾಳ, ಚೀನಾ, ಆಫ್ಘನಿಸ್ತಾನ್...' ಎನ್ನುತ್ತಾರೆ. ಆ ಉತ್ತರ ಪೂರ್ತಿಯಾಗಿ ಸರಿಯಲ್ಲ. ಏಕೆಂದರೆ ಆಫ್ಘನಿಸ್ತಾನ್ ನಮ್ಮ ದೇಶದ ಗಡಿಯಲ್ಲಿಲ್ಲ. ಮಧ್ಯದಲ್ಲಿ ಪಾಕ್ ಆಕ್ರಮಿತ ಕಾಶ್ಮೀರ ಇದೆ. ಅಲ್ಲಿನವರು ಅದನ್ನು ಆಜಾದ್ (ಸ್ವತಂತ್ರ) ಕಾಶ್ಮೀರ ಎನ್ನುತ್ತಾರೆ.

ಅದು ನಮ್ಮ ಕಾಶ್ಮೀರಕ್ಕಿಂತ ಹೆಚ್ಚು ಸುಂದರವಾಗಿದೆ. ಅದರ ನಟ್ಟನಡುವೆ ಇದೆ ಗಿಲ್ಗಿಟ್ ನಗರ. ಆ ಊರಿಗೆ ಸ್ವಲ್ಪ ದೂರದಲ್ಲಿ... ಹಿಂಜೂ ನದಿಯ ದಡದಲ್ಲಿ... ಕುಸಿದು ಬೀಳಲು ಸಿದ್ಧವಾಗಿರುವ ಒಂದು ಶಿಥಿಲವಾದ ಛತ್ರದಲ್ಲಿದ್ದಾನೆ ಮಿಜ್ರಾಡಿನ್. ಭಾರತ ದೇಶದಲ್ಲಿ ಅವನು ನಡೆಸುವ ಆಪರೇಷನ್‌ಗಳೆಲ್ಲ ಅಲ್ಲಿಂದಲೇ!

ಅವನು ನಿಜ ಹೆಸರು ರಿಯಾಜ್ ಹಸನ್.

'ಮತ'ವೇ ಅವನ ಉಸಿರು, ಉಗ್ರವಾದಿ ಸಂಘಟನೆಗಳನ್ನು (ಆ ಹೆಸರನ್ನು ಅವನು ಒಪ್ಪುವುದಿಲ್ಲ) ಒಂದು ಛತ್ರಿಯಡಿ ತಂದರೆ ಒಂದು ತಿಂಗಳಲ್ಲಿ ಕಾಶ್ಮೀರ ಪಾಕಿಸ್ತಾನ್‌ನಲ್ಲಿ ವಿಲೀನವಾಗುತ್ತದೆ ಎನ್ನುವುದು ಅವನ ಅಭಿಪ್ರಾಯ, ಅಭಿಲಾಷೆ. ಲಕ್ಷ ಮಂದಿಯನ್ನು ಸಾಯಿಸಿಯಾದರೂ ಸರಿಯೇ, ಇಡೀ ಪ್ರಪಂಚವನ್ನು ಒಂದೇ ಮತಕ್ಕೆ ಸೇರಿಸಿ ಬಿಡಬೇಕು ಎನ್ನುವುದು ಅವನ ವಾಸ್ತವಕ್ಕೆ ದೂರವಾದ ಆಶಯ, ಆಲೋಚನೆ.

ಹಿಂದೆ ಅವನು ಲಷ್ಕರ್ ತೊಯ್ಬಾದ ಪ್ರಮುಖನೇ, ಆದರೆ ಅವನ ಗುರಿ, ಲಷ್ಕರ್ ಆಶಯಗಳು ಬೇರೆ ಬೇರೆ. ಹಾಗಾಗಿ ಅವನು ಆ ಸಂಸ್ಥೆಯನ್ನು ತೊರೆದು ಒಂದು ವರ್ಷದ ಹಿಂದೆ ಐ.ಎಸ್. (ಇಸ್ಲಾಮಿಕ್ ಸ್ಟೇಟ್) ಜೊತೆ ಕೈ ಜೋಡಿಸಿದ್ದನು. ಆ ರೀತಿ ಕೈ ಜೋಡಿಸಿದ್ದೇ ಒಂದು ಅಗ್ನಿಪರ್ವತದ ವಿಸ್ಫೋಟವಾಗಿತ್ತು!...

ಆ ವಿಷಯವನ್ನು ಇಷ್ಟು ಖಚಿತವಾಗಿ ಹೇಳುವುದಕ್ಕೆ ಕಾರಣ.. ಅವನು ಆ ರೀತಿ ಕೈ ಜೋಡಿಸಿದ ಒಂದೇ ವರ್ಷದಲ್ಲಿ ಕಾಶ್ಮೀರ್‌ನಲ್ಲಿ ಟೆರರಿಸಂ ಮೂರು ಪಟ್ಟು ಹೆಚ್ಚಾಯಿತು. ಸುಮಾರು ಸಾವಿರ ಮಂದಿ ಭಾರತ ರಕ್ಷಣಾದಳ ಸೈನಿಕರು ಅಸು ನೀಗಿದ್ದರು.

ಆದರೆ ಆ ದಿನ ಅವನ ಮೂಡ್ ಚೆನ್ನಾಗಿರಲಿಲ್ಲ. ಕಾರಣ ಸ್ವಲ್ಪ ತೀವ್ರವಾದದ್ದೇ! ಕಾಶ್ಮೀರದ ಮುಖ್ಯಮಂತ್ರಿ ಮೆಹಬೂಬ ಮುಫ್ತಿ ಜೊತೆಗಿನ ಸಂಬಂಧವನ್ನು ಬಿ.ಜೆ.ಪಿ. ಹರಿದುಕೊಂಡಿತ್ತು. ರಾಜ್ಯಪಾಲರ ಆಡಳಿತ ಬಂದ ಮೇಲೆ ರಾಜ್ಯ ಸ್ವಲ್ಪ ಪ್ರಶಾಂತವಾಗಿದೆ. ಹಿಂದೆ ಪ್ರತಿ ತಿಂಗಳು ಸುಮಾರು ನೂರು ಯುವಕರು ಉಗ್ರವಾದಿ ಸಂಘಟನೆ ಸೇರುತ್ತಿದ್ದರು. ಈಗದು ಐವತ್ತಕ್ಕೆ ಇಳಿದಿದೆ.

'ನಿಮಗೇನು ಬೇಕು?' ಐ.ಎ.ಎಸ್ಸೋ? ಆಜಾದಿಯೋ?' ಎಂಬ ಸರ್ಕಾರಿ ಪೋಸ್ಟರುಗಳು ಯುವಜನರನ್ನು ಆಕರ್ಷಿಸುತ್ತಿವೆ. ಕಾಶ್ಮೀರದಿಂದ ಡಾಕ್ಟರ್ ಷಾ ಫೈಸಲ್ ಎಂಬ ಯುವಕ ಮೊಟ್ಟ ಮೊದಲ ಬಾರಿಗೆ ಗ್ರೂಪ್ ಒನ್ ಆಫೀಸರ್ ಆಗಿ ಸೆಲೆಕ್ಟ್ ಆದನು.

ಈ ಬದಲಾಗುತ್ತಿರುವ ಪರಿಸ್ಥಿತಿಯನ್ನು ಸ್ವಲ್ಪ ಕಾಲ ಪರಿಶೀಲಿಸಿ ಆನಂತರ ರಾಜ್ಯದಲ್ಲಿ ಚುನಾವಣೆ ನಡೆಸಿ ಅಧಿಕಾರಕ್ಕೆ ಬರಬೇಕು ಎನ್ನುವುದು ಬಿ.ಜೆ.ಪಿ. ಉದ್ದೇಶ. ಅದು ಹಾಗೆ ನಡೆದರೆ ಸ್ವಲ್ಪ ಕಷ್ಟ, ಏಕೆಂದರೆ ಉಗ್ರವಾದವನ್ನು ಮಟ್ಟಹಾಕುವ ವಿಷಯದಲ್ಲಿ ಪಿ.ಡಿ.ಪಿ., ಕಾಂಗ್ರೆಸ್‌ಗಿಂತ ಬಿ.ಜೆ.ಪಿ. ನಿಲುವು ಕಠಿಣ.

ಆದರೆ ಅವನ ಸಮಸ್ಯೆ ಅದಲ್ಲ, ಆಂಧ್ರ ಪ್ರದೇಶ್...!

ಛತ್ರದ ಮುಂದೆ ಪ್ರವಹಿಸುತ್ತಿರುವ ನದಿಯನ್ನು ನೋಡುತ್ತ ಯೋಚಿಸುತ್ತಿದ್ದನು. ಹಿಮಾಲಯ ಶಿಖರಾಗ್ರಗಳಲ್ಲಿ ಕರಗಿದ ನೀರು ಹಿಂಜೂ ನದಿ ಹೆಸರಿನಲ್ಲಿ ಗಿಲ್ಗಿಟ್ ಪ್ರಾಂತ್ಯದಲ್ಲಿ ಹರಿದು ಸಿಂಧೂ ನದಿಯನ್ನು ಸೇರುತ್ತದೆ. ಅವನು ಕಾಶ್ಮೀರಕ್ಕೆ ಬರಬೇಕೆಂದುಕೊಂಡಾಗ, ಬೆಟ್ಟದ ಮೇಲಿಂದ ಧುಮ್ಮಿಕ್ಕುವ ಆ ನೀರಿನ ಪ್ರವಾಹದಲ್ಲಿ ಒಂದು ತೆಪ್ಪದಲ್ಲಿ ಸಿಂಧೂ ನದಿಯವರೆಗೆ ಸಾಗಿ, ಅಲ್ಲಿಂದ ಮಾನಸ ಸರೋವರದವರೆಗೆ ಅಪಾಯಕಾರಿಯಾದ ಎದುರು ಪ್ರಯಾಣ ಮಾಡಿ, ಅಲ್ಲಿಂದ ಭಾರತ ಪ್ರವೇಶಿಸುತ್ತಾನೆ. ಹೊರಗಿನವರಿಗೆ ಇದು ತೀರಾ ಮೂರ್ಖವಾದ ಯೋಚನೆ ಅನಿಸಬಹುದಾದರೂ, ಅವನೆಷ್ಟು ಎಚ್ಚರಿಕೆ ವಹಿಸುತ್ತಾನೆಂದರೆ, ಆಂಟೀ ಟೆರರಿಸ್ಟ್ ಸ್ಕ್ವಾಡ್. ಈವರೆಗೆ ಅವನ ಕುರಿತು ಯಾವ ವಿವರವನ್ನೂ ತಿಳಿದುಕೊಂಡಿಲ್ಲ! ಪ್ರಸ್ತುತ ಅವನ ಯೋಚನೆಗೆ ಕಾರಣ ಒಬ್ಬ ಪೊಲೀಸ್ ಇನ್‌ಫಾರ್ಮರ್.

ಹೈದ್ರಾಬಾದ್‌ನಲ್ಲಿ ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಸಂಚಲನ ಮೂಡಿಸಿದ್ದ ಗೋಕುಲ್ ಚಾಟ್, ದಿಲ್‌ಸುಖ್‌ನಗರ್ ಬ್ಲಾಸ್ಟ್‌ಗಳ ಹಿಂದಿದ್ದ ಉಗ್ರಗಾಮಿಗಳಿಗೆ ಸಹಾಯ ಮಾಡಿದವರೆಲ್ಲ ಕೇವಲ ಒಂದು ತಿಂಗಳಲ್ಲಿ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದರು. ಸಾಮರ್ಲಕೋಟದಲ್ಲಿ ಸುಬ್ರಹ್ಮಣ್ಯಂ ಉರುಫ್ ಅಮಾನುಲ್ಲಾನನ್ನು ಮೊನ್ನೆ ಅರೆಸ್ಟ್ ಮಾಡಿದರು. ಸೌದಿಯಿಂದ ಜಿಹಾದ್ ಬೆಂಬಲಿಗನೊಬ್ಬ ಕಳಿಸಿದ್ದ 13 ಲಕ್ಷ ರೂಪಾಯಿ ನಗದು ಪೊಲೀಸರಿಗೆ ಸಿಕ್ಕಿತು. ಅಷ್ಟೇ ಅಲ್ಲ, ಶ್ರೀನಗರದಲ್ಲಿ ಸೈನ್ಯವು ರಾತ್ರೋರಾತ್ರಿ ಮೂವರು ಉಗ್ರವಾದಿಗಳನ್ನು ಬಲಿ ಹಾಕಿತ್ತು.

ಇದೆಲ್ಲ ನಡೆದಿದ್ದು 'ಆಂಧ್ರಾ ಮೂಲದ ಇನ್ಫಾರ್ಮರ್ ನೀಡಿದ ಇನ್‌ಫರ್ಮೇಷನ್'ನಿಂದ ಎಂದು ಖಚಿತವಾಗಿ ತಿಳಿದುಬಂದಿತ್ತು. ಇದರಿಂದ ಅವನಿಗೊಂದು ವಿಷಯ ಸ್ಪಷ್ಟವಾಗಿ ಅರ್ಥವಾಗಿತ್ತು. ಆಂಧ್ರಾ, ತೆಲಂಗಾಣಗಳಲ್ಲಿ ಯಾರೋ ಪೊಲೀಸ್ ಇನ್ಫಾರ್ಮರ್ ನಮ್ಮ ಎಲ್ಲ ವಿವರಗಳನ್ನು ಪೊಲೀಸರಿಗೆ ಕೊಡುತ್ತಿದ್ದಾನೆ. ಆ ಇನ್ಫಾರ್ಮರ್‌ನನ್ನು ಸೆರೆ ಹಿಡಿಯದಿದ್ದರೆ ನಮ್ಮವರೆಷ್ಟೋ ಮಂದಿ ಪೊಲೀಸರಿಗೆ ಸಿಕ್ಕಿ ಬೀಳುತ್ತಾರೆ. ಇಷ್ಟು ಕಾಲ ಸಾಗಿಸುತ್ತ ಬಂದಿರುವ ಜಿಹಾದ್ ಒಮ್ಮೆಗೇ ಸ್ತಬ್ದವಾಗುತ್ತದೆ. ಹಾಗಾಗುವ ಮೊದಲು ತಾನು ಸ್ವತಃ ಹೋಗಿ ಅವನ ಇಡೀ ಕೋಟರಿಯನ್ನು ನಾಶ ಮಾಡಬೇಕು.

ಹಾಗೆ ಯೋಚಿಸಿದ ಅವನು ಅಂದೇ ದಕ್ಷಿಣ ಭಾರತದತ್ತ ಪ್ರಯಾಣ ಬೆಳೆಸಿದನು.

ಪರಿಚಿತರ ಜೊತೆ ಇರುವುದು ಅವನಿಗಿಷ್ಟವಿಲ್ಲ. ಅವರೆಲ್ಲರ ಮೇಲೆ ಪೊಲೀಸರ ನಿಗಾ ಇರುತ್ತದೆ. ಅದಕ್ಕಾಗಿ ಬಾಲ್ಯಮಿತ್ರನೊಬ್ಬನಿಗೆ ಫೋನ್ ಮಾಡಿ ತಾನು 'ಅವನ ಮನೆಯಲ್ಲಿ ಕೆಲವು ದಿನ ಇರಬಹುದೆ? ಎಂದು ಕೇಳಿದನು. ಇಪ್ಪತ್ತೈದು ವರ್ಷಗಳ ನಂತರ ಫೋನ್ ಮಾಡಿದ ಮಿಜ್ರಾಡಿನ್‌ನನ್ನು ಆ ಸ್ನೇಹಿತ ತುಂಬು ಹೃದಯದಿಂದ ಆಹ್ವಾನಿಸಿದನು.

ಆ ಸ್ನೇಹಿತನ ಹೆಸರು ಖಾನ್ ಅಬ್ದುಲ್ ಗಫಾರ್ ಖಾನ್!

—3—

## ಆಹಾ ಸ್ವರ ಮಾಧುರ್ಯ!

'ಮಧುರಾ ನಗರಿ ಸಮೀಪದಲಿ... ಮಲಯ ಮಾರುತ ತೀಡುವಾಗ... ಅರ್ಧನಿಮೀಲಿತ ಕಂಗಳಿಂದ.... ಎದುರು ನೋಡುತ್ತಿದ್ದನು ಕೃಷ್ಣ' ಎಂದು ಹಾಡುತ್ತಿದ್ದಳು ಕಲ್ಯಾಣಿ. ಸುತ್ತಲೂ ಸ್ನೇಹಿತೆಯರ ಗುಂಪು. ಅದರಲ್ಲಿ ಬಹಳ ಮಂದಿಗೆ ತೆಲುಗು ಬರುತ್ತಿರಲಿಲ್ಲ. ಆದರೂ ಆ ಸ್ವರ ಮಾಧುರ್ಯಕ್ಕೆ ಮುಗ್ಧರಾಗಿ ಮೌನವಾಗಿ ಆಲಿಸುತ್ತಿದ್ದರು.

ಸಿಗುವುದಿಲ್ಲ ಎಂದು ತಿಳಿದಿದ್ದರೂ ಪಾರ್ಟೀ ಟಿಕೆಟ್‌ಗಾಗಿ ಪಾದಯಾತ್ರೆ ಮಾಡುತ್ತಿರುವ ರಾಜಕಾರಣಿಯಂತೆ ರೈಲು ನಿಧಾನವಾಗಿ ಚಲಿಸುತ್ತಿತ್ತು. ಒಂದು ಮೂಲೆಯಲ್ಲಿ ಕುಳಿತಿದ್ದನು ಮಿಜ್ರಾಡಿನ್. ಅವನಿಗೆ ಹಾಡು ಅರ್ಥವಾಗಲಿಲ್ಲ. ಆದರೆ ಚೆನ್ನಾಗಿದೆ ಅನಿಸಿತು. ಹುಡುಗಿ ಅದಕ್ಕಿಂತ ಚೆನ್ನಾಗಿದ್ದಾಳೆ ಎಂದು ಕೊಂಡು ತದೇಕವಾಗಿ ಅವಳನ್ನೇ ನೋಡುತ್ತಿದ್ದನು.

ಉಗ್ರವಾದಿಗಳಿಗೆ ದುಶ್ಚಟಗಳಿರುವುದಿಲ್ಲ, ಸಿಗರೇಟ್ ಕೂಡ ಸೇದುವುದಿಲ್ಲ. ತಮ್ಮ ಗುರಿಯಲ್ಲದೆ ಅವರಿಗೆ ಬೇರೆ ಏನೂ ಕಾಣಿಸುವುದಿಲ್ಲ ಎನ್ನುತ್ತಾರೆ. ಅದು ತಪ್ಪು. ಟ್ವಿನ್